ಇ. ಇವುಗಳಲ್ಲಿ ಎಷ್ಟರ ಕೆಲಸ ಪ್ರಾರಂಭವಾಗಿದೆ?

ಈ. ಈ ಪವರ್ ಸ್ಟೇಷನ್ ಪ್ರಾರಂಭಿಸಲು ಇರುವ ಅಡಚಣೆಗಳೇನು?

ಉತ್ತರಿಸಲಿರುವ ಸಚಿವರು: ಶ್ರೀ ವೀರ ಕುಮಾರ ಅ.ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ. ಮೈಸೂರು ತಾಲ್ಲೂಕಿನಲ್ಲಿ ಪ್ರಸ್ತುತ ಒಟ್ಟು 15 ವಿದ್ಯುತ್ ಉಪ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಆ. ವಿದ್ಯುತ್ ಕೊರತೆ ನಿವಾರಿಸಲು ಮೈಸೂರು ತಾಲ್ಲೂಕು ಮೇಘಲಾಪುರದಲ್ಲಿ ಒಂದು 66:11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲಾಗುವುದು. ಇದಲ್ಲದೇ ಪವರ್ ಫ್ಲೋ ಅಧ್ಯಯನಗಳ ಪ್ರಕಾರ ಬಸ್ತಿಪುರದಲ್ಲಿ ಒಂದು 400 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ ಹಾಗೂ ವಾಜಮಂಗಲದಲ್ಲಿ ಒಂದು 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಗಳ ಸ್ಥಾಪನೆ ಬಗ್ಗೆ ಪ್ರಸ್ತಾವನೆಗಳಿದ್ದು ಈ ಪ್ರಸ್ತಾವನೆಗಳು ಇನ್ನೂ ಪ್ರಾರಂಭಿಕ ಹಂತದಲ್ಲಿವೆ.

ಇ. ಮೇಘಲಾಪುರದಲ್ಲಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಅಂದಾಜು ಪಟ್ಟಿಗೆ ಅನುಮೋದನೆ ನೀಡಿರುತ್ತದೆ. ಮತ್ತು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ.

ಈ. ಸದ್ಯದಲ್ಲಿ ಯಾವ ಅಡಚಣೆಗಳು ಇರುವುದಿಲ್ಲ.

ಬೆಂಗಳೂರು ಮೆಗಾಸಿಟಿ ಅಭಿವೃದ್ಧಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 932(537)

ಸದಸ್ಯರ ಹೆಸರು: ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ)

ಪ್ರಶ್ನೆ

1. ಬೆಂಗಳೂರು ಮೆಗಾಸಿಟಿ ಯೋಜನೆ ಜಾರಿಗೊಳಿಸುವ ಬಗ್ಗೆ ಸರ್ಕಾರಕ್ಕೆ ಇದೆಯೇ?

2. ಹೌದಾದರೆ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು ಏನು?

3. ಇದಕ್ಕೆ ಕಾಲಬದ್ಧ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆಯೇ?

4. ಮೆಗಾಸಿಟಿ ಯೋಜನೆಯಲ್ಲಿ ಯಾವ ಪೂರಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು? (ವಿವರ ನೀಡುವುದು)

ಉತ್ತರಿಸುವ ಸಚಿವರು: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಉತ್ತರ

1. ಕೇಂದ್ರ ಪುರಸ್ಕೃತ ಮೆಗಾಸಿಟಿ ಯೋಜನೆಯು ಅನುಷ್ಠಾನದಲ್ಲಿರುತ್ತದೆ.

2. ಈ ನಿಟ್ಟಿನಲ್ಲಿ ಇದುವರೆವಿಗೂ 24 ಯೋಜನೆಗಳಿಗೆ ಹಣ ಸಹಾಯ ಒದಗಿಸಲಾಗಿದೆ.

3. ಈ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವ ಪ್ರತಿಯೊಂದು ಯೋಜನೆಗೆ ಪೂರ್ಣಗೊಳಿಸಲು ಕಾಲ ನಿರ್ಣಯ ಇರುತ್ತದೆ.

4. ಬೆಂಗಳೂರು ಮೆಗಾಸಿಟಿ ಯೋಜನೆಯಡಿ ಉತ್ತಮ ಹಾಗೂ ಸುರಕ್ಷಿತ ಸಾರಿಗೆ ವ್ಯವಸ್ಥೆ ಯೋಜನೆ, ಪರಿಸರಾಭಿವೃದ್ಧಿ ಯೋಜನೆಗಳೂ, ಕೊಳಚೆ ಪ್ರದೇಶಾಭಿವೃದ್ಧಿ ಯೋಜನೆ ಸಂಚಾರವನ್ನು ಸುಗಮಗೊಳಿಸುವುದು ಮತ್ತು ಇತರೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಚಾಮರಾಜ ನಗರದಲ್ಲಿ ನ್ಯಾಯಾಲಯ ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 935(542)

ಸದಸ್ಯರ ಹೆಸರು: ಶ್ರೀ ಗುರುಸ್ವಾಮಿ ಸಿ.(ಚಾಮರಾಜನಗರ)

ಪ್ರಶ್ನೆ

ಅ) ಚಾಮರಾಜನಗರದಲ್ಲಿ ಸೀನಿಯರ್ ಡಿವಿಜನ್ ನ್ಯಾಯಾಲಯ ಮತ್ತು ಜಿಲ್ಲಾ ನ್ಯಾಯಾಲಯ ಆರಂಭಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಆ) ಹಾಲಿ ನ್ಯಾಯಾಲಯದ ಕಟ್ಟಡದಲ್ಲಿ ಮೊದಲನೇ ಅಂತಸ್ತು ನಿರ್ಮಾಣಕ್ಕೆ ಹಣ ಬಿಡುಗಡೆಯಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?

ಸಚಿವರ ಹೆಸರು ಮತ್ತು ಖಾತೆ: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)